**All India Radio: Bangalore**
**National Bulletin In Kannada**
**21.03.2026  19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**21.03.2026  19.35 hrs**

**<>><><*><><<>**

ಮುಖ್ಯಾಂಶಗಳು

೧. ಪ್ರಧಾನಿ ನರೇಂದ್ರ ಮೋದಿ-ಇರಾನ್ ಅಧ್ಯಕ್ಷರೊಂದಿಗೆ ಇಂದು ಮಾತುಕತೆ; ಜಾಗತಿಕ ಪೂರೈಕೆ ಸರಪಳಿ ಅಡ್ಡಿಗೆ ಪ್ರಧಾನಿ ಖಂಡನೆ

೨. ಜಾಗತಿಕವಾಗಿ ಭಾರತ ಬಲಿಷ್ಠ ಔಷಧ ಆರ್ಥಿಕತೆಯಾಗಿ ಹೊರಹೊಮ್ಮುತ್ತಿದೆ - ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್

೩. ಹಿಂದೂ ಮಹಾಸಾಗರದ ಡಿಯಾಗೋ ಗಾರ್ಸಿಯಾ ದ್ವೀಪದಲ್ಲಿನ ಬ್ರಿಟನ್-ಅಮೆರಿಕ ವಾಯುನೆಲೆ ಮೇಲೆ ಇರಾನ್ ಕ್ಷಿಪಣಿ ದಾಳಿ ಯತ್ನ; ಬ್ರಿಟನ್ ಖಂಡನೆ

೪. ದೇಶದೆಲ್ಲೆಡೆ ಈದ್-ಉಲ್-ಫಿತರ್ ಸಂಭ್ರಮಾಚರಣೆ; ರಾಷ್ಟ್ರಪತಿ, ಉಪ ರಾಷ್ಟ್ರಪತಿ , ಪ್ರಧಾನಿಯಿಂದ ಶುಭಾಶಯ

**<>><><*><><<>**

ಪ್ರಧಾನಿ ನರೇಂದ್ರ ಮೋದಿ ಇಂದು ಇರಾನ್ ಅಧ್ಯಕ್ಷ ಡಾ.ಮಸೌದ್ ಪೆಜೆಶ್ಕಿಯಾನ್ ಅವರೊಂದಿಗೆ ಮಾತುಕತೆ ನಡೆಸಿದರು. ಈ ವೇಳೆ, ಪ್ರಧಾನಿ ಈದ್-ಉಲ್-ಫಿತ್ರ ಶುಭಾಶಯ ತಿಳಿಸಿದರು. ಈ ಹಬ್ಬದ ಋತುವು ಪಶ್ಚಿಮ ಏಷ್ಯಾದಲ್ಲಿ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಯನ್ನು ತರುತ್ತದೆ ಎಂದು ಉಭಯ ನಾಯಕರು ಆಶಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ, ಪ್ರಾದೇಶಿಕ ಸ್ಥಿರತೆಗೆ ಬೆದರಿಕೆ ಹಾಕುವ ಮತ್ತು ಜಾಗತಿಕ ಪೂರೈಕೆ ಸರಪಳಿಗಳನ್ನು ಅಡ್ಡಿಪಡಿಸುವ ಹಾಗೂ ಆ ಪ್ರದೇಶಗಳಲ್ಲಿ ನಿರ್ಣಾಯಕ ಮೂಲಸೌಕರ್ಯಗಳ ಮೇಲಿನ ದಾಳಿಗಳನ್ನು ಖಂಡಿಸಿದ್ದಾರೆ. ನೌಕಾಯಾನ ಸ್ವಾತಂತ್ರ್ಯವನ್ನು ಕಾಪಾಡುವ ಮತ್ತು ಹಡಗು ಮಾರ್ಗಗಳು ಮುಕ್ತ ಮತ್ತು ಸುರಕ್ಷಿತವಾಗಿರುವುದನ್ನು ಖಚಿತಪಡಿಸಿಕೊಳ್ಳುವ ಮಹತ್ವವನ್ನು ಅವರು ಪುನರುಚ್ಚರಿಸಿದ್ದಾರೆ. ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳ ಸುರಕ್ಷತೆ ಮತ್ತು ಭದ್ರತೆಗೆ ಇರಾನ್ ನೀಡುತ್ತಿರುವ ನಿರಂತರ ಬೆಂಬಲವನ್ನು ಪ್ರಧಾನಿ ಶ್ಲಾಘಿಸಿದ್ದಾರೆ.

**<>><><*><><<>**

ಜಾಗತಿಕವಾಗಿ ಭಾರತ, ಬಲಿಷ್ಠ ಔಷಧ ಆರ್ಥಿಕತೆಯಾಗಿ ಹೊರಹೊಮ್ಮುತ್ತಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ. £Àನವದೆಹಲಿಯಲ್ಲಿಂದು ಮಾಧ್ಯಮ ಸಂಸ್ಥೆಯೊಂದು ಆಯೋಜಿಸಿದ್ದ ಆರೋಗ್ಯ ರಕ್ಷಣಾ ಶೃಂಗಸಭೆ ಉದ್ದೇಶಿಸಿ ಮಾತನಾಡಿದ ಸಚಿವರು, ಜಾಗತಿಕ ಗುಣಮಟ್ಟದ ಮಾನದಂಡಗಳು ಹಾಗೂ ಸ್ಥಳೀಯ ನಾವೀನ್ಯತೆ ಮೇಲೆ ಗಮನ ಹೊಂದಿರುವ

ಭಾರತದ ಆರೋಗ್ಯ ರಕ್ಷಣಾ ಮತ್ತು ವೈದ್ಯಕೀಯ ತಂತ್ರಜ್ಞಾನ ಪರಿಸರ ವ್ಯವಸ್ಥೆಯು, ಪ್ರಮುಖ ಬದಲಾವಣೆಗೆ ಒಳಗಾಗುತ್ತಿದೆ ಎಂದು ಹೇಳಿದರು. ಭಾರತವು ಈ ವಲಯದಲ್ಲಿ ಅಗ್ರ ಜಾಗತಿಕ ಉತ್ಪಾದನಾ ಕೇಂದ್ರಗಳಲ್ಲಿ ಒಂದಾಗುವ ಗುರಿಯನ್ನು ಹೊಂದಿದೆ, ಆಮದು ಅವಲಂಬನೆಯನ್ನು ತಗ್ಗಿಸಿ, ರಫ್ತು ಪ್ರಮಾಣ ಹೆಚ್ಚಿಸುತ್ತದೆ ಎಂದು ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದರು.

<><><*><><>

ನಾಳೆ 'ವಿಶ್ವ ಜಲದಿನ'. ಜಾಗತಿಕವಾಗಿ ಆಚರಿಸಲ್ಪಡುವ ಜಲ ದಿನದ ಭಾಗವಾಗಿ ನಾಡಿದ್ದು, ನವದೆಹಲಿಯಲ್ಲಿ ಜಲ ಶಕ್ತಿ ಸಚಿವಾಲಯವು, ವಿಶ್ವ ಜಲ ದಿನ ಸಮಾವೇಶ ೨೦೨೬ ಅನ್ನು ಆಯೋಜಿಸಲು ನಿರ್ಧರಿಸಿದೆ. ಜಲ ಶಕ್ತಿ ಕೇಂದ್ರ ಸಚಿವ ಸಿ.ಆರ್.ಪಾಟೀಲ್, ಸರ್ಕಾರ ಮತ್ತು ಕೈಗಾರಿಕಾ ಕ್ಷೇತ್ರದ ಹಿರಿಯ ಪ್ರತಿನಿಧಿಗಳೊಂದಿಗೆ ಸಮಾವೇಶದ ಉದ್ಘಾಟನಾ ಅಧಿವೇಶನದಲ್ಲಿ ಭಾಗವಹಿಸಲಿದ್ದಾರೆ. 'ಇಂಡಸ್ಟ್ರಿ ಆಫ್ ವಾಟರ್' ಎಂಬ ವಿಷಯಾಧಾರಿತ ಈ ಸಮಾವೇಶವು, ಶಾಶ್ವತ ಜಲ ನಿರ್ವಹಣೆ ಕುರಿತ ಸಂವಾದ, ಹೊಸತನ ಮತ್ತು ಸಹಕಾರಕ್ಕಾಗಿ ರಾಷ್ಟ್ರೀಯ ವೇದಿಕೆಯಾಗಿ ಕಾರ್ಯನಿರ್ವಹಿಸಲಿದೆ ಎಂದು ಸಚಿವಾಲಯ ತಿಳಿಸಿದೆ. ಈ ಸಮ್ಮೇಳನವು, ನೀತಿನಿರ್ಧಾರಕರು, ಕೈಗಾರಿಕಾ ಮುಖಂಡರು, ಅಕಾಡೆಮಿಯಾ, ನವೋದ್ಯಮಗಳು, ಎಂಎಸ್‌ಎಂಇಗಳು ಮತ್ತು ಯುವ ಆವಿಷ್ಕಾರಕರನ್ನು ಒಟ್ಟುಗೂಡಿಸಿ, ತಂತ್ರಜ್ಞಾನ ಆಧಾರಿತ, ವಿಸ್ತರಿಸಬಹುದಾದ ಪರಿಹಾರಗಳನ್ನು ರೂಪಿಸಲು ಸಹಕರಿಸಲಿದೆ. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಿಂದ ೭೦೦ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

<><><*><><>

ಹಿಂದೂ ಮಹಾಸಾಗರದ ಡಿಯಾಗೋ ಗಾರ್ಸಿಯಾ ದ್ವೀಪದಲ್ಲಿರುವ ಬ್ರಿಟನ್-ಅಮೆರಿಕ ವಾಯುನೆಲೆಯ ಮೇಲೆ ಇರಾನ್ ಸೇನೆಯು ಕ್ಷಿಪಣಿ ಹಾರಿಸಿದೆ. ಇದನ್ನು ಬ್ರಿಟನ್ ತೀವ್ರವಾಗಿ ಖಂಡಿಸಿದ್ದು, ಇರಾನ್‌ನ ಅಜಾಗರೂಕ ದಾಳಿ ಎಂದು ತಿಳಿಸಿದೆ. ಇರಾನ್‌ನ ಈ ದಾಳಿಯು, ವಿಫಲವಾಗಿದೆ ಎಂದು ಬ್ರಿಟನ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದು, ದಾಳಿಯ ವಿವರಗಳನ್ನು ಬಹಿರಂಗಪಡಿಸಿಲ್ಲ. ಇರಾನ್‌ನಿಂದ ಸುಮಾರು ೨ ಸಾವಿರದ ೫೦೦ ಮೈಲು ದೂರದಲ್ಲಿರುವ ಈ ನೆಲೆಗೆ ಕ್ಷಿಪಣಿಗಳು ಎಷ್ಟು ಸಮೀಪಕ್ಕೆ ಬಂದಿವೆ ಎಂಬುದು ಇನ್ನೂ ದೃಢವಾಗಿಲ್ಲ. ಪ್ರದೇಶದಾದ್ಯಂತ ಇರಾನ್ ಕೈಗೊಳ್ಳುತ್ತಿರುವ ಕ್ರಮಗಳು ಮತ್ತು ಹಾರ್ಮುಜ್ ಜಲಸಂಧಿಯನ್ನು ನಿಯಂತ್ರಣದಲ್ಲಿ ಇಡುವುದು ಬ್ರಿಟನ್‌ನ ಹಿತಾಸಕ್ತಿಗಳು ಮತ್ತು ಮಿತ್ರ ರಾಷ್ಟ್ರಗಳಿಗೆ ಬೆದರಿಕೆಯಾಗಿವೆ ಎಂದು ಬ್ರಿಟನ್ ರಕ್ಷಣಾ ಸಚಿವಾಲಯ ತಿಳಿಸಿದೆ. ಅಮೆರಿಕಾ-ಇಸ್ರೇಲ್ ದಾಳಿಗಳಲ್ಲಿ ಬ್ರಿಟನ್ ಭಾಗವಹಿಸಿಲ್ಲ, ಆದರೆ ಇರಾನ್ ಕ್ಷಿಪಣಿ ತಾಣಗಳನ್ನು ಗುರಿಯಾಗಿಸಲು ಅಮೆರಿಕನ್ ಬಾಂಬರ್‌ಗಳಿಗೆ ಬ್ರಿಟನ್ ನೆಲೆಗಳನ್ನು ಬಳಸಲು ಅವಕಾಶ ನೀಡಿದೆ.

<><><*><><>

ಉತ್ತರ ಪ್ರದೇಶ ಭೇಟಿಯ ಮೂರನೇ ಮತ್ತು ಕೊನೆಯ ದಿನವಾದ ಇಂದು, ರಾಷ್ಟ್ರಪತಿ ದ್ರೌಪದಿ ಮುರ್ಮು ಮಥುರಾ ಜಿಲ್ಲೆಯ ಗೋವರ್ಧನ್‌ನಲ್ಲಿರುವ ದಂಘಾಟಿ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ದೆಹಲಿಗೆ ತೆರಳುವ ಮುನ್ನ ಸಾಂಪ್ರದಾಯಿಕ ಗೋವರ್ಧನ ಪರಿಕ್ರಮವನ್ನು ಸಹ ರಾಷ್ಟ್ರಪತಿಗಳು ಕೈಗೊಂಡರು. ರಾಷ್ಟ್ರಪತಿ ಮುರ್ಮು ಅವರ ಮೂರು ದಿನಗಳ ಉತ್ತರ ಪ್ರದೇಶ ಭೇಟಿಯು ಗುರುವಾರ ಅಯೋಧ್ಯೆಯ ರಾಮ ಜನ್ಮಭೂಮಿ ದೇವಸ್ಥಾನದ ದರ್ಶನದೊಂದಿಗೆ

ಪ್ರಾರಂಭವಾಯಿತು. ನಂತರ, ಅವರು ಇಸ್ಕಾನ್ ದೇವಸ್ಥಾನ ಮತ್ತು ವೃಂದಾವನದ ಪ್ರೇಮ್ ಮಂದಿರದಲ್ಲಿ ಪ್ರಾರ್ಥನೆ ಸಲ್ಲಿಸಿದರು. ನಿನ್ನೆ ರಾಮಕೃಷ್ಣ ಮಿಷನ್ ಸೇವಾಶ್ರಮದ ಹೊಸ ಆಂಕೊಲಾಜಿ ಬ್ಲಾಕ್ ಅನ್ನು ಉದ್ಘಾಟಿಸಿದ್ದಾರೆ.

**<>><><*><><<>**

ದೇಶದೆಲ್ಲೆಡೆ ಇಂದು ಈದ್-ಉಲ್-ಫಿತರ್ ಹಬ್ಬದ ಸಂಭ್ರಮಾಚರಣೆ ಹಿನ್ನಲೆ, ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಜನತೆಗೆ ಶುಭಾಶಯ ತಿಳಿಸಿದ್ದಾರೆ. ರಾಷ್ಟ್ರಪತಿಗಳು ತಮ್ಮ ಸಂದೇಶದಲ್ಲಿ ಈ ಹಬ್ಬವು ಸ್ವ-ನಿಯಂತ್ರಣ, ದಾನಶೀಲತೆ ಎಂಬ ಸಂದೇಶವನ್ನು ನೀಡುವುದರೊಂದಿಗೆ ಪ್ರೀತಿ, ಸಹೋದರತ್ವ, ಶಾಂತಿ ಮತ್ತು ಪರಸ್ಪರ ಸೌಹಾರ್ದತೆಯನ್ನು ಸಾರುತ್ತದೆ ಎಂದು ಹೇಳಿದ್ದಾರೆ. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಹಬ್ಬವು ನಂಬಿಕೆ, ಸೌಹಾರ್ದ ಮತ್ತು ಸಹಾನುಭೂತಿಗೆ ಪ್ರೇರಣೆ ನೀಡಲಿ ಮತ್ತು ಎಲ್ಲರಿಗೂ ಸಂತೋಷ ಮತ್ತು ಯಶಸ್ಸು ತರಲಿ ಎಂದು ಹಾರೈಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಈ ಹಬ್ಬವು ಜನತೆಗೆ ಸಂತೋಷ, ಉತ್ತಮ ಆರೋಗ್ಯ ಮತ್ತು ಸಮೃದ್ಧಿಯ ನೀಡಲಿ ಎಂದು ತಮ್ಮ ಸಂದೇಶದಲ್ಲಿ ಹೇಳಿದ್ದಾರೆ.

**<>><><*><><<>**

ಆಧುನಿಕ ಮತ್ತು ಪ್ರಗತಿಶೀಲ ಮನೋಭಾವವನ್ನು ಅನುಸರಿಸುವಾಗ ನಮ್ಮ ದೇಶದ ಶ್ರೀಮಂತ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯನ್ನು ಮರೆಯಬಾರದು ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ. ಮಹಾರಾಷ್ಟ್ರ ನಾಗ್ಪುರದ ರೇಶಿಂಬಾಗ್‌ನ ಡಾ.ಹೆಡ್ಗೇವಾರ್ ಸ್ಮೃತಿ ಮಂದಿರದಲ್ಲಿ ಇಂದು ನಡೆದ ೨೯ನೇ 'ರಾಷ್ಟ್ರೀಯ ಯುವ ಸಂಸತ್ತನ್ನು' ಉದ್ದೇಶಿಸಿ ಮಾತನಾಡಿದ ಅವರು, 'ವಿಕಸಿತ ಭಾರತ' ನಿರ್ಮಾಣದಲ್ಲಿ ಯುವಕರ ಭಾಗವಹಿಸುವಿಕೆಯ ಮಹತ್ವವನ್ನು ತಿಳಿಸಿದರು. ಜಾಗತಿಕ ಸಂಘರ್ಷದ ಭೀತಿಯನ್ನು ಎದುರಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ, ಇದರ ಏಕೈಕ ಪರಿಹಾರ 'ಸಂವಾದ ಮತ್ತು ಚರ್ಚೆಯಲ್ಲಿದೆ' ಎಂದು ಹೇಳಿದರು. 'ಭಾರತೀಯ ಭಾಷೆಗಳು ಮತ್ತು ವಿಕಸಿತ ಭಾರತ@೨೦೪೭' ಎಂಬ ವಿಷಯವನ್ನು ಕೇಂದ್ರವಾಗಿಟ್ಟುಕೊಂಡು ನಾಲ್ಕು ದಿನಗಳ 'ರಾಷ್ಟ್ರೀಯ ಯುವ ಸಂಸತ್ತು' ಆರಂಭಗೊಂಡಿದೆ.

**<>><><*><><<>**

ಜಗತ್ತು ಬಿಕ್ಕಟ್ಟಿನ ಅವಧಿಯನ್ನು ಎದುರಿಸುತ್ತಿದ್ದು, ಹಲವಾರು ಪ್ರದೇಶಗಳಲ್ಲಿ ಸಂಘರ್ಷಗಳು ಚಾಲ್ತಿಯಲ್ಲಿವೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ದಾಳಿಗಳು ಭಾರತಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿಗೆ ಕಳವಳಕಾರಿ ವಿಷಯವಾಗಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಉತ್ತರಾಖಂಡದ ಹಲ್ದ್ವಾನಿಯಲ್ಲಿ ರಾಜ್ಯ ಸರ್ಕಾರ ನಾಲ್ಕು ವರ್ಷಗಳನ್ನು ಪೂರೈಸಿದ ಹಿನ್ನೆಲೆ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಿಂದ ಉಂಟಾಗುವ ಸಂಭಾವ್ಯ ಇಂಧನ ಮತ್ತು ಆಹಾರ ಬಿಕ್ಕಟ್ಟಿನ ಕುರಿತು ಮಾತನಾಡಿದ ಸಚಿವರು, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ದೇಶವನ್ನು ಈವರೆಗೆ ಅಂತಹ ಬಿಕ್ಕಟ್ಟುಗಳಿಂದ ರಕ್ಷಿಸಲಾಗಿದೆ ಎಂದು ಹೇಳಿದರು. ಭಾರತವು, ಈ ವಿಷಯದ ಬಗ್ಗೆ ಸ್ಪಷ್ಟ ನಿಲುವನ್ನು ತೆಗೆದುಕೊಂಡಿದೆ, ಸಂವಾದ ಮತ್ತು ರಾಜತಾಂತ್ರಿಕತೆಯ ಮೂಲಕ ಪರಿಹಾರವನ್ನು ಕಂಡುಕೊಳ್ಳಬೇಕು ಎಂದು ಸಚಿವ ರಾಜನಾಥ್ ಸಿಂಗ್ ತಿಳಿಸಿದರು.

<>><><*><><<>

ಸೌದಿಅರೇಬಿಯಾದಲ್ಲಿರುವ ಭಾರತದ ರಾಯಭಾರ ಕಚೇರಿ, ಭಾರತೀಯ ಸಮುದಾಯಕ್ಕಾಗಿ ದಮಮ್-ಜುಬೈಲ್ ಮತ್ತು ಹೈಲ್‌ನಲ್ಲಿ ಸಲಹೆ ಮತ್ತು ದೃಢೀಕರಣ ಸೇವೆಯನ್ನು ಒದಗಿಸುತ್ತಿದೆ. ಈ ಕೇಂದ್ರಗಳಿಗೆ ಭೇಟಿ ನೀಡುತ್ತಿರುವ ಭಾರತೀಯ ಸಮುದಾಯದ ದೂತವಾಸ ಸಮಸ್ಯೆಗಳನ್ನು ತೃಪ್ತಿಕರವಾಗಿ ನಿವಾರಿಸಲಾಗುತ್ತಿದೆ ಎಂದು ರಾಯಭಾರ ಕಚೇರಿ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಲಾಗಿದೆ.

<>><><*><><<>

ಭಾರತವನ್ನು ಜಾಗತಿಕ ಜೈವಿಕ ಔಷಧ ಉತ್ಪಾದನಾ ಕೇಂದ್ರವಾಗಿ ಸ್ಥಾಪಿಸಲು ಸರ್ಕಾರವು ೨೦೨೬-೨೭ರ ಕೇಂದ್ರ ಬಜೆಟ್‌ನಲ್ಲಿ ಬಯೋಫಾರ್ಮಾ ಶಕ್ತಿ ಉಪಕ್ರಮವನ್ನು ಪ್ರಸ್ತಾಪಿಸಿದೆ.  ಮುಂದಿನ ಐದು ವರ್ಷಗಳಲ್ಲಿ ಒಟ್ಟು ೧೦ ಸಾವಿರ ಕೋಟಿ ರೂಪಾಯಿ ವೆಚ್ಚದೊಂದಿಗೆ ಪ್ರಾರಂಭವಾಗಲಿರುವ ಈ ಯೋಜನೆಯು, ಬಯೋಲಾಜಿಕ್ಸ್ ಮತ್ತು ಬಯೋಸಿಮಿಲರ್‌ಗಳ ದೇಶೀಯ ಉತ್ಪಾದನೆಗಾಗಿ ಬಲವಾದ ಪರಿಸರ ನಿರ್ಮಿಸುವ ಗುರಿ ಹೊಂದಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>